

## ರೂಪ ಹಾಸನ

ಕಲೆ: ರೂಪಶ್ರೀ ಕಲ್ಲಿಗನೂರು



# ನನ್ನದೇ ಉಯ್ಯಾಲೆಯಲ್ಲಿ...

ಇಲ್ಲಿ ನನ್ನಷ್ಟಕ್ಕೇ ಬದುಕಿದರೆ ಸಾಲದು,
ಅವರಿವರ ತಕ್ಕಡಿಗಳಲ್ಲಿ ಅಳತೆಗೊಳಪಡಬೇಕು!
ವಿನಾಕಾರಣ ಕಟಕಟೆಯಲ್ಲಿ ನಿಲ್ಲಬೇಕು
ಶಿಲುಬೆಗಳನ್ನು ಹೊರಬೇಕು
ಸಾಕ್ಷಿ ಪುರಾವೆಗಳ ಹುಡುಕಿ ತರಬೇಕು
ಮತ್ತೆ ಮತ್ತೆ ನಾನೇನೆಂದು ಸಾಬೀತುಪಡಿಸಬೇಕು!

ಅವರ ತಕ್ಕಡಿಯಲ್ಲಿ ತೂಗುವುದಿಲ್ಲೆಂದು ಅವರೂ
ಇವರ ತಕ್ಕಡಿಯಲ್ಲಿ ತೂಗುವುದಿಲ್ಲೆಂದು ಇವರೂ
ಕಡು ಅಪರಾಧಿ ನಾನೆಂದು
ತಕ್ಕಡಿಯಿಂದ ಹೊರ ದಬ್ಬಿದರು ಅವರಿವರು...
ತೂಗು ಬೊಟ್ಟುಗಳೇ ನೆಟ್ಟಗಿಲ್ಲದ ತಕ್ಕಡಿಗಳಲ್ಲಿ
ನಾ ತೂಗಲಾರೆನೆಂದು
ಹಲವು ತಕ್ಕಡಿಗಳಿಂದ, ಕಟಕಟೆಗಳಿಂದ
ನಾನೇ ಹೊರಬಿದ್ದೆ, ಹೊರಿಸಿದ ಶಿಲುಬೆಗಳಿಂದ
ಆದಕ್ಕೀಗ... ಅಳತೆ, ಸಾಬೀತುಗಳ ಗೊಡವೆ ಬಿಟ್ಟು
ನನ್ನದೇ ಉಯ್ಯಾಲೆಯಲ್ಲಿ
ತೂಗಿಕೊಳ್ಳುವುದು ಸಾಧ್ಯವಾಗಿದೆ!